ಕರ್ನಾಟಕ ಸರ್ಕಾರ
**ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ**
ರಾಷ್ಟ್ರೀಯ ಸೇವಾ ಯೋಜನೆ

**ಸಂ:** ತಾಶಿಇ/ರಾಸೇಯೋ/ಪ್ರಶಸ್ತಿ/ಸಿಆರ್–10/2008

ಸಂಯೋಜನಾಧಿಕಾರಿಯವರ ಕಛೇರಿ,
ಅರಮನೆ ರಸ್ತೆ ಬೆಂಗಳೂರು–01,
ದಿನಾಂಕ: 22–11–2016

ವಿಷಯ: **ಇಂದಿರಾಗಾಂಧಿ ಎನ್‌ಎಸ್‌ಎಸ್ ರಾಷ್ಟ್ರ ಪ್ರಶಸ್ತಿ ಗಳಿಸಿರುವ ಬಗ್ಗೆ.**

******

2015–16ನೇ ಸಾಲಿನಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆಯ ರಾಷ್ಟ್ರೀಯ ಸೇವಾ ಯೋಜನೆಯ ಧ್ಯೇಯೋದ್ದೇಶಕ್ಕನುಸಾರ ಎನ್‌ಎಸ್‌ಎಸ್ ಘಟಕಗಳ ಮೂಲಕ ರಚನಾತ್ಮಕ ಕಾರ್ಯಕ್ರಮಗಳ ಹಮ್ಮಿಕೊಂಡು ದೈನಂದಿನ ಚಟುವಟಿಕೆಗಳನ್ನು ಮತ್ತು ವಿಶೇಷ ಶಿಬಿರಗಳನ್ನು ಪರಿಣಾಮಕಾರಿಯಾಗಿ ನಡೆಸಿದ್ದು, ಸದರಿ ಕಾರ್ಯಕ್ರಮವನ್ನು ಪರಿಮಕಾರಿಯಾಗಿ ನಿರ್ವಹಿಸಿರುವುದನ್ನು ಪರಿಗಣಿಸಿದ ಕೇಂದ್ರ ಸರ್ಕಾರದ ಯುವಜನ ಸೇವಾ ಇಲಾಖೆಯು 2015–16 ನೇ ಸಾಲಿನ ಎನ್‌ಎಸ್‌ಎಸ್ ರಾಷ್ಟ್ರ ಪ್ರಶಸ್ತಿ ಪ್ರಕಟಣೆಯಲ್ಲಿ ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ನಮ್ಮ **ತಾಂತ್ರಿಕ ಶಿಕ್ಷಣ ನಿರ್ದೇಶನಾಲಯದ ಬಿವಿವಿಎಸ್ ಪಾಲಿಟೆಕ್ನಿಕ್ ಬಾಗಲಕೋಟೆಯ ಕಾರ್ಯಕ್ರಮಾಧಿಕಾರಿಯಾದ ಶ್ರೀ ಎಂ.ಎನ್ ತಳವಾರ ಇವರಿಗೆ "ಅತ್ಯುತ್ತಮ ಕಾರ್ಯಕ್ರಮಾಧಿಕಾರಿ" ಯ ಪ್ರಶಸ್ತಿಯನ್ನು ದಿನಾಂಕ:19–11–2016 ರಂದು ರಾಷ್ಟ್ರಪತಿ ಭವನ ನವದೆಹಲಿಯಲ್ಲಿ ಭಾರತದ ಮಾನ್ಯ ರಾಷ್ಟ್ರಪತಿಗಳು ಪ್ರದಾನ ಮಾಡಿರುತ್ತಾರೆ. ಈ ಇಲಾಖೆಯಲ್ಲಿ ಅನುಷ್ಠಾನಕ್ಕೆ ಬಂದ ರಾಸೇಯೋಗೆ ಇದುವರೆಗೂ ರಾಷ್ಟ್ರ ಮಟ್ಟದಲ್ಲಿ ದೊರೆತಿರುವ ಎರಡನೇಯ ಬಹು ದೊಡ್ಡ ಪ್ರಶಸ್ತಿ ಇದಾಗಿದೆ.** ಈ ಗೌರವಕ್ಕೆ ಪಾತ್ರವಾಗಿರುವುದು ಉನ್ನತೆ ಶಿಕ್ಷಣ ಇಲಾಖೆ ಅಧೀನದ ನಮ್ಮ ತಾಂತ್ರಿಕ ಶಿಕ್ಷಣ ಇಲಾಖೆಗೆ ಹೆಮ್ಮೆಯ ಮತ್ತು ಅಭಿಮಾನದ ಸಂಗತಿಯಾಗಿದೆ.

ಈ ಪ್ರಶಸ್ತಿಗೆ ಪಾತ್ರರಾದ ಬಿವಿವಿಎಸ್ ಪಾಲಿಟೆಕ್ನಿಕ್ ಬಾಗಲಕೋಟೆಯ ಕಾರ್ಯಕ್ರಮಾಧಿಕಾರಿಯಾದ **ಶ್ರೀ ಎಂ.ಎನ್ ತಳವಾರ ಹಾಗೂ ಪ್ರಾಚಾರ್ಯರಾದ ಶ್ರೀ ಜಿ.ಬಿ ದಾನಶೆಟ್ಟಿ** ಇವರಿಗೆ ತಾಂತ್ರಿಕ ಶಿಕ್ಷಣ ಇಲಾಖೆಯ ಪರವಾಗಿ ನಿರ್ದೇಶಕರಾದ **ಶ್ರೀ ಹೆಚ್.ಯು.ತಳವಾರ** ಮತ್ತು ರಾಸೇಯೋ ಸಂಯೋಜನಾಧಿಕಾರಿ ಡಾ. ಗುರುಪ್ರಸಾದ ಎಂ. ಹೂಗಾರ ಅಭಿನಂದಿಸಿರುತ್ತಾರೆ.

26/11
(ಹೆಚ್.ಯು.ತಳವಾರ್)
ನಿರ್ದೇಶಕರು.



